**ಕರ್ನಾಟಕ - ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು - 560 001.**

ಸಂಖ್ಯೆ : ಸಿ1(3)/20 ವರ್ಷ.ಹೆ.ವೇ.ಬಡ್ತಿ/18/E-766468/2022-23 ದಿನಾಂಕ; 26/07/2022

**-;ಜ್ಞಾಪನ;-**

**ವಿಷಯ:** 1999 ನೇ ಸಾಲಿನಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಗ್ರೂಪ್-ಬಿ ವೃಂದದ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಹುದ್ದೆಗಳಲ್ಲಿ ನೇಮಕಗೊಂಡು ಸತತ 20 ವರ್ಷಗಳ ಸೇವೆಯನ್ನು ಸಲ್ಲಿಸಿರುವ ಗ್ರೂಫ್ ಬಿ ಅಧಿಕಾರಿಗೆ ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡುವ ಬಗ್ಗೆ.

**ಉಲ್ಲೇಖ:** 1]ಅಧಿಸೂಚನೆ ಸಂಖ್ಯೆ ಡಿಪಿಎಆರ್ 4 ಎಸ್.ಡಿ.ಇ 2005 ದಿನಾಂಕ: 04/04/2005.

2]ಸರ್ಕಾರದ ಪತ್ರ ಸಂಖ್ಯೆ: ಇಡಿ 40 ಎಸ್ ಓ ಹೆಚ್ 2019 ಬೆಂಗಳೂರು ದಿನಾಂಕ: 16/08/2021

3] ಈ ಕಛೇರಿ ಪತ್ರ ಸಂಖ್ಯೆ: ಸಿ1(5) 20 ವ.ಹೆ.ವೇ.ಬ.ಮಂ./32019-20 ದಿನಾಂಕ: 25/08/2021

4] ಸರ್ಕಾರಿ ಆದೇಶ ಸಂಖ್ಯೆ: ಎಫ್ ಡಿ 30 ಎಸ್. ಆರ್.ಪಿ.2012 ದಿನಾಂಕ: 31/01/2014

5] ಸರ್ಕಾರಿ ಆದೇಶ ಸಂಖ್ಯೆ: ಎಫ್ ಡಿ 31 ಎಸ್. ಆರ್.ಪಿ 2007 (iii) ದಿನಾಂಕ: 14/08/2008

6]ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು ರವರ ಪತ್ರ ಸಂಖ್ಯೆ: ಇ2/ಸಾಶಿಇ/ಗ್ರೂ.ಬಿ/20ವ.ಹೆ.ಮಿ.ವೇ.ಬಡ್ತಿ/132/2021-22 ದಿನಾಂಕ: 27/06/2022

7]ಈ ಕಛೇರಿ ಜ್ಞಾಪನ ಸಮಸಂಖ್ಯೆ ದಿನಾಂಕ: 24/01/2021

******

**ಪ್ರಸ್ತಾವನೆ:**

ಉಲ್ಲೇಖ (1) ರ ಸರ್ಕಾರದ ಅಧಿಸೂಚನೆ ಪ್ರಕಾರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಸರ್ಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರು ಹಾಗೂ/ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳ ನೇಮಕಾತಿ ಪ್ರಾಧಿಕಾರ ಆಗಿರುತ್ತಾರೆ.

1999 ನೇ ಸಾಲಿನಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಗ್ರೂಪ್-ಬಿ ವೃಂದದ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಹುದ್ದೆಗಳಲ್ಲಿ ನೇಮಕಗೊಂಡು ಸತತ 20 ವರ್ಷಗಳ ಕಾಲ ಯಾವುದೇ ಮುಂಬಡ್ತಿ ಇಲ್ಲದೇ, ನಿರಂತರ ಒಂದೇ ಹುದ್ದೆಯಲ್ಲಿ ಸೇವೆ ಸಲ್ಲಿಸಿರುವ ಸಂಬಂಧ ಉಲ್ಲೇಖ(4)ರ ಸರ್ಕಾರಿ ಆದೇಶದಂತೆ 20 ವರ್ಷಗಳ ಸೇವೆಗೆ ಒಂದು ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿಗಾಗಿ ಅರ್ಹರಿದ್ದು, ಉಲ್ಲೇಖ-6 ರಲ್ಲಿ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು ರವರಿಂದ ಶ್ರೀಮತಿ ನಾಗರತ್ನಮ್ಮ, ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಎಂ.ಸಿ. ಹಳ್ಳಿ, ತರಿಕೆರೆ ತಾ||, ಚಿಕ್ಕಮಗಳೂರು ಜಿಲ್ಲೆ ರವರಿಗೆ 20 ವರ್ಷಗಳ ಸೇವೆಗೆ ಒಂದು ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿಗಾಗಿ ಶಿಫಾರಸ್ಸು ಮಾಡಿ, ಅಗತ್ಯವಿರುವ ದಾಖಲೆಗಳನ್ನು ಲಗತ್ತಿಸಿ, ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಸದರಿಯವರಿಗೆ ಒಂದು ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿ ನೀಡುವ ಸಂಬಂಧ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ:**

ಶ್ರೀಮತಿ ನಾಗರತ್ನಮ್ಮ, ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಎಂ.ಸಿ. ಹಳ್ಳಿ, ತರಿಕೆರೆ ತಾ||, ಚಿಕ್ಕಮಗಳೂರು ಜಿಲ್ಲೆ ರವರು ನಿರಂತರವಾಗಿ 20 ವರ್ಷಗಳ ಸೇವೆಯನ್ನು ಪೂರೈಸಿರುವುದರಿಂದ ಉಲ್ಲೇಖ [2] ರ ಸರ್ಕಾರದ ನಿರ್ದೇಶನದಂತೆ ಹಾಗೂ ಉಲ್ಲೇಖ [4] ಮತ್ತು [5] ರ ಆದೇಶಗಳಲ್ಲಿನ ಷರತ್ತು

**ಪು.ತಿ.ನೋ.**

ಮತ್ತು ನಿಬಂಧನೆಗಳಿಗೆ ಒಳಪಟ್ಟು ಈ ಕೆಳಕಂಡ ಕೋಷ್ಟಕದಲ್ಲಿನ ಸದರಿಯವರ ಹೆಸರಿನ ಮುಂದೆ ನಮೂದಿಸಿರುವ ದಿನಾಂಕದಿಂದ ಜಾರಿಗೆ ಬರುವಂತೆ 20 ವರ್ಷಗಳ ಸೇವೆಗೆ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಿ ಆದೇಶಿಸಿದೆ.

| **ಅಧಿಕಾರಿಗಳ ಹೆಸರು, ಪದನಾಮ/ವಿಳಾಸ ಶ್ರೀ/ಶ್ರೀಮತಿ** | **ಗ್ರೂಪ್ ಬಿ ಹುದ್ದೆಯಲ್ಲಿ ಸೇವೆಗೆ ಸೇರಿದ ದಿನಾಂಕ** | **20 ವರ್ಷದ ಹೆಚ್ಚುವರಿ ವೇತನ ಬಡ್ತಿಗೆ ಅರ್ಹ ದಿನಾಂಕ** | **ಹಾಲಿ ಪಡೆಯುತ್ತಿರುವ ವೇತನ ಶ್ರೇಣಿ** | **20 ವರ್ಷಗಳ ಪೂರ್ಣಗೊಂಡ ನಂತರದ ವೇತನ/ವೇತನ ಶ್ರೇಣಿ** |
|---|---|---|---|---|
| ನಾಗರತ್ನಮ್ಮ, ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಎಂ.ಸಿ. ಹಳ್ಳಿ, ತರಿಕೆರೆ ತಾ||, ಚಿಕ್ಕಮಗಳೂರು ಜಿಲ್ಲೆ | 03/05/1999 | 03/05/2019 | 48900-92700 | ವೇತನ ಶ್ರೇಣಿ (48900-92700) ರಲ್ಲಿ ಒಂದು ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡಿದೆ |

**[ಕಛೇರಿ ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ]**

**ಡಾ. ರೂಪಶ್ರೀ ಎಸ್. ಕೆ.ಎ.ಎಸ್.**
ಜಂಟಿ ನಿರ್ದೇಶಕರು (ಆಡಳಿತ)

**ಇವರಿಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ರವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
2. ಉಪನಿರ್ದೇಶಕರು, ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಮಗಳೂರು ರವರಿಗೆ ಮುಂದಿನ ಕ್ರಮಕ್ಕಾಗಿ.
3. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ವಿಭಾಗ, ಆಯುಕ್ತರ ಕಛೇರಿ, ಸಾ.ಶಿ.ಇ ಬೆಂಗಳೂರು ರವರಿಗೆ ಕಳುಹಿಸುತ್ತಾ, ಈ ಜ್ಞಾಪನವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
4. ಶ್ರೀಮತಿ ನಾಗರತ್ನಮ್ಮ, ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಎಂ.ಸಿ. ಹಳ್ಳಿ, ತರಿಕೆರೆ ತಾ||, ಚಿಕ್ಕಮಗಳೂರು ಜಿಲ್ಲೆ ರವರಿಗೆ ಮಾಹಿತಿಗಾಗಿ.

**ಪ್ರತಿಯನ್ನು:**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಕಛೇರಿ ಪ್ರತಿ